# ದಿ ಗ್ರೇಟ್ ಕಲಿ

■ ಎಸ್ಸೆಚ್



ಈತ ಆಧುನಿಕ ಗೋಲಿಯಾತ್. 7.3 ಅಡಿ ಎತ್ತರ, 190 ಕೆಜಿ ತೂಗುವ ಪರ್ವತದಂತಹ ದೇಹ. 63 ಇಂಚು ಸುತ್ತಳತೆ ಎದೆ. ಭುಜವನ್ನು ಚುಂಬಿಸುವ ಉದ್ದನೆಯ ಕೂದಲು. 'ನಾನು ದಿಟ್ಟಿಸಿ ನೋಡಿದರೆ ಭೂಮಿಯೇ ನಡುಗುತ್ತದೆ' ಎಂದು ತನ್ನನ್ನೇ ತಾನು ಹಾಸ್ಯ ಮಾಡಿಕೊಳ್ಳುವ 'ದಿ ಗ್ರೇಟ್ ಕಲಿ' ದಲೀಪ್ ಸಿಂಗ್ ರಾಣಾ 'ಬಿಗ್ ಬಾಸ್–4' ರಿಯಾಲಿಟಿ ಶೋನಲ್ಲಿ ಎರಡನೇ ಸ್ಥಾನ ಗಳಿಸಿದಾಗ ಆತನ ಅಗಾಧ ಶರೀರದ 'ಭಾರ ತಡೆದುಕೊಳ್ಳಲಾಗದೇ' ಕಿರುತೆರೆ ನಡುಗುತ್ತಿತ್ತು!

ಹಿಮಾಚಲ ಪ್ರದೇಶದಲ್ಲಿ ಹುಟ್ಟಿದ ಈತನ ಅಜ್ಜನೂ ಎತ್ತರವೂ 7 ಅಡಿ. ಹೆಚ್ಚಿನ ಶಿಕ್ಷಣವಿಲ್ಲ. ರಸ್ತೆ ಬದಿ ಕಲ್ಲು ಒಡೆಯುವ ದಿನಗೂಲಿಯಾಗಿ ಕೆಲಸ ಮಾಡಿದ್ದ. 38 ವರ್ಷದ ಈ ಪಂಜಾಬಿ ಪಂಜಾಬ್ ಪೊಲೀಸ್ ವಿಭಾಗದಲ್ಲಿ ಕಾನ್‌ಸ್ಟೇಬಲ್ ಆಗಿ ಸೇರ್ಪಡೆಯಾದಾಗ ದೇಹದಾರ್ಢ್ಯ ಪಟುವಾಗಿದ್ದ. ಜೊತೆಗೆ ಬಾಕ್ಸರ್. ಎರಡು ಬಾರಿ 'ಮಿಸ್ಟರ್ ಇಂಡಿಯಾ' ಪಟ್ಟ ಗಳಿಸಿದ್ದ. ಕುಸ್ತಿ ಏನೇನೂ ಗೊತ್ತಿರಲಿಲ್ಲ.

ಸ್ನೇಹಿತರು, ಕುಟುಂಬದವರ ಒತ್ತಾಸೆಯಿಂದ ಕುಸ್ತಿ ಕಲಿಯಲು ಅಮೆರಿಕಕ್ಕೆ ಅರೆಮನಸ್ಸಿನಿಂದಲೇ ಹೋದ. 'ಜೈಂಟ್ ಸಿಂಗ್' ಹೆಸರಿನಲ್ಲಿ ಅಮೆರಿಕದ ಆಲ್ ಪ್ರೊ ರೆಸ್ಲಿಂಗ್ ಸೇರಿಕೊಂಡ ಕಲಿಗೆ ಹಣ, ಹೆಸರು ಎರಡೂ ಬಂದಿದ್ದು ವರ್ಲ್ಡ್ ರೆಸ್ಲಿಂಗ್ ಎಂಟರ್‌ಟೈನ್‌ಮೆಂಟ್‌ನಿಂದ. ಅಮೆರಿಕದ ಈ ಚಾನೆಲ್‌ನಲ್ಲಿ ಕುಸ್ತಿಪಟುವಾಗಿ ಪ್ರದರ್ಶನ ನೀಡುತ್ತಿರುವ ಈತನ ಟ್ರೇಡ್‌ಮಾರ್ಕ್ ಎಂದರೆ 'ಕಲಿ ಬಾಂಬ್' ಮತ್ತು 'ಕಲಿ ವೈಸ್ ಗ್ರಿಪ್'. ಅಷ್ಟಕ್ಕೂ ಕಾಳಿದೇವಿಯ ಹೆಸರನ್ನು ಇಟ್ಟುಕೊಂಡ ಈತ ಕಲಿ' ಯೆಂದೇ ಖ್ಯಾತನಾಗಿದ್ದು. ಬಹುಷಃ ಅಮೆರಿಕನ್ನರ ನಾಲಿಗೆ ಹೊರಳದೆ ಉಚ್ಚಾರ ಈ ರೀತಿ ಆಗಿರಬಹುದು.

ದಿನಕ್ಕೆ ಎರಡು ಗಂಟೆ ವ್ಯಾಯಾಮ. 500 ಪೌಂಡ್ ತೂಕದ ಬೆಂಚ್ ಪ್ರೆಸ್ ಮತ್ತು 120 ಪೌಂಡ್‌ನ ಬೈಸೆಪ್ ಕರ್ಲ್ ಬಳಕೆ ಈತನ ವಿಶೇಷ. ಭರ್ಜರಿ ಆಹಾರ. ದಿನಕ್ಕೆ 24 ಮೊಟ್ಟೆಗಳು, ಕೋಳಿಮಾಂಸ, ಹಣ್ಣು, ತರಕಾರಿ. ಖಾದ್ಯತೈಲ ಮತ್ತು ಸಕ್ಕರೆ. ಕೊಬ್ಬು ಸೇವನೆ ಇಲ್ಲವೇ ಇಲ್ಲ. 'ಬಿಗ್ ಬಾಸ್' ಶೋ ಸಂದರ್ಭದಲ್ಲಿ ಲೋನಾವಾಲಾದ ಮನೆಯಲ್ಲಿ ವ್ಯಾಯಾಮ ಮಾಡಲು ಈತನ ಅಳತೆಗೆ ಸರಿಯಾದ ಸಲಕರಣೆಗಳೇ ಸಿಗಲಿಲ್ಲವಂತೆ.

ಕಲಿ ಹಾಲಿವುಡ್‌ನ 'ದಿ ಲಾಂಗೆಸ್ಟ್ ಯಾರ್ಡ್' ಸಿನಿಮಾದಲ್ಲಿ ಬ್ರಾಡ್ ಪಿಟ್ ಜೊತೆ ನಟಿಸಿರುವುದಲ್ಲದೇ, ಬಾಲಿವುಡ್‌ನ 'ರಾಮಾ– ದಿ ಸೇವಿಯರ್' ಸಿನಿಮಾದಲ್ಲಿ ವಾಲಿಯ ಪಾತ್ರ ಮಾಡಿದ್ದಾನೆ. ಪತ್ನಿ ಹರಮಿಂದರ್ ಕೌರ್ ಎತ್ತರದಲ್ಲಿ ಅಂತಹ ವಿಶೇಷವೇನಿಲ್ಲ.

ಎರಡು ವರ್ಷಗಳ ಹಿಂದೆ ಈತ ಭಾರತಕ್ಕೆ ಭೇಟಿ ನೀಡಿದಾಗ ಮಾಧ್ಯಮಗಳಲ್ಲಿ ಭಾರಿ ಸುದ್ದಿಯಾಯಿತು. ಸೋನಿಯಾ ಗಾಂಧಿ ಪುತ್ರಿ ಪ್ರಿಯಾಂಕಾ ವಡೇರ ತನ್ನ ಇಬ್ಬರು ಮಕ್ಕಳೊಂದಿಗೆ ಕಲಿಯನ್ನು ಭೇಟಿ ಮಾಡಿದ್ದಳು. ಶಾರುಕ್ ಖಾನ್ ಕೂಡಾ ಮಕ್ಕಳನ್ನು ಒಯ್ದು ಈತನ ಭೇಟಿ ಮಾಡಿ ಆಟೋಗ್ರಾಫ್ ಪಡೆದಿದ್ದ.

ಕಲಿ 'ಬಿಗ್ ಬಾಸ್' ಶೋನಲ್ಲಿ ಪ್ರಥಮ ರನ್ನರ್‌ಅಪ್‌ಗೆ ತೃಪ್ತಿಪಟ್ಟುಕೊಂಡರೂ ಈ ಶೋನಲ್ಲಿ ಭಾಗವಹಿಸಿದ್ದ ಡಾಲಿ ಬಿಂದ್ರಾ ಮೇಲೆ ಭಾರಿ ಕೋಪ ವ್ಯಕ್ತಪಡಿಸಿದ್ದಾನೆ. ಆತನಿಂದ ಮನೆಯ ಕಸಮುಸುರೆ, ಅಡುಗೆ ಮಾಡಿಸಿದ್ದು ಡಾಲಿ. ಒಂದೆರಡು ಬಾರಿ ಆಕೆ ಜೊತೆ ಜಗಳವೂ ಆಗಿದ್ದು ಅದು ಶೋನ ಹೈಲೈಟ್ ಎಂದೇ ಬಿಂಬಿಸಲಾಗಿತ್ತು. ■

